ಅಪರಾಧ ನಡೆದ ಜಾಗವನ್ನು ನೋಡಲು ಬಂದಿದ್ದ ರುದ್ರೇಶ್, ಜೊತೆಯಲ್ಲಿ ಬಂದಿದ್ದ ಕಾನ್‌ಸ್ಟೆಬಲ್ ಸೀತಾರಾಮಯ್ಯನಿಗೆ ಹೇಳಿದ.

"ನಿಜ ಸರ್... ಬಿಜುಗೆ ಮೋಟಿವ್ ಇದೆ, ಆದರೆ ಸಾಕ್ಷಿಗಳಿಲ್ಲ. ಸಿಂಥಿಯಾಗೆ ದ್ವೇಷ ಇದೆ, ಆದರೆ ಕೊಲೆ ಮಾಡಿ ಮುಚ್ಚಿ ಹಾಕುವಷ್ಟು ಧೈರ್ಯವಿಲ್ಲ. ಇವರಿಬ್ಬರನ್ನು ಬಿಟ್ಟರೆ ಸಂಶಯ ಪಡುವಂತವರು ಇನ್ಯಾರೂ ಇಲ್ಲ..."

"ಈಗ ಉಳಿದಿರುವುದು ಒಂದೇ ದಾರಿ... ಲೂಸಿಯೇ ಆತ್ಮಹತ್ಯೆ ಮಾಡಿಕೊಂಡಿರಬೇಕು. ಅದನ್ನು ಬಿಜು ತಲೆಯಮೇಲೆ ಬರುವಹಾಗೆ ಮಾಡುವ ಉದ್ದೇಶ ಆಕೆಗೆ ಇದ್ದಿರಬೇಕು. ಆದರೆ ಅದಕ್ಕೆ ಈ ಕ್ರೈಂ ಸೀನ್ ಹೋಲಿಕೆಯಾಗಲ್ಲ."

"ಅಂದರೆ ಇದೊಂದು ಪರ್ಫೆಕ್ಟ್ ಕ್ರೈಂ ಅಂತೀರಾ ಸಾರ್?" ಸೀತಾರಾಮಯ್ಯ ಕೇಳಿದ.

"ಪರ್ಫೆಕ್ಟ್ ಕ್ರೈಂ ಅನ್ನುವುದು ಯಾವುದೂ ಇಲ್ಲ. ಕ್ರೈಂ ಮಾಡುವಾಗ ಅಪರಾಧಿ ಒಂದು ಲಾಜಿಕ್ ಉಪಯೋಗಿಸಿರುತ್ತಾನೆ. ಆ ಲಾಜಿಕ್ ತಿಳಿಯಬೇಕು ಅಷ್ಟೇ. ಈಗ ಮತ್ತೊಮ್ಮೆ ಇಲ್ಲಿ ಏನಾಗಿರಬಹುದು ಅಂತ ನೋಡೋಣ."

"ಲೂಸಿಯನ್ನು ಸಾಯಿಸುವ ಉದ್ದೇಶದಿಂದಲೇ ಕೊಲೆಗಾರ ಬಂದಿದ್ದಾನೆ. ಅವನು ಬಿಜು ಗೋವಾಕ್ಕೆ ಹೋಗಿರುವುದು ಗೊತ್ತಿದ್ದೇ ಬಂದಿದ್ದಾನೆ. ಅಥವಾ ಲೂಸಿ ಬರಹೇಳಿದ್ದಾಳೆ. ಸೊ... ಲೂಸಿಗೆ ಅವನು ಗೊತ್ತಿರಬೇಕು. ಬಂದವನ ಜೊತೆ ಲೂಸಿ ಊಟ ಮಾಡಿದ್ದಾಳೆ. ನಂತರ ಕೊಲೆಗಾರ ಲೂಸಿಯನ್ನು ಕೊಂದು ಕ್ರೈಂ ಸೀನ್ ಕ್ಲಿಯರ್ ಮಾಡಿ ಹೋಗಿದ್ದಾನೆ."

ಅವನ ಮಾತುಗಳನ್ನು ಅಲ್ಲಿಯೇ ತಡೆಯುತ್ತಾ ಸೀತಾರಾಮಯ್ಯ, "ಸರ್, ಸಿಂಥಿಯಾ ಇಲ್ಲಿಗೆ ಒಂಬತ್ತಕ್ಕೆ ಬಂದಿದ್ದಾಳೆ. ಅಷ್ಟುಹೊತ್ತಿಗೆ ಲೈಟ್ ಆಫ್ ಆಗಿತ್ತು ಅಂತ ಹೇಳಿದ್ದಾಳೆ. ಅಂದರೆ ಕೊಲೆಗಾರ ಅಷ್ಟುಹೊತ್ತಿಗಾಗಲೇ ಕೊಲೆ ಮಾಡಿ ಮುಗಿಸಿದ್ದಾನೆ. ಇಲ್ಲದಿದ್ದರೆ ತಾನೇ ಬರಹೇಳಿದ್ದವಳಿಗೆ ಬಾಗಿಲು ತೆರೆಯದಿರುವ, ಅಥವಾ ಮನೆಯ ಲೈಟುಗಳನ್ನೆಲ್ಲಾ ಆರಿಸಿಕೊಂಡಿರುವ ಉದ್ದೇಶ ಏನು?"

"ಅಂದರೆ?..."

"ಕ್ರೈಂ ಮಾಡಿ ಇಷ್ಟು ಕ್ಲೀನ್ ಮಾಡಿ ಹೋಗಲು ಕನಿಷ್ಠ ಒಂದು ಗಂಟೆಯಾದರೂ ಬೇಕು..."

ಒಂದು ಕ್ಷಣ ರುದ್ರೇಶ್ ಬೆಚ್ಚಿದ.

'ಕೊಲೆ, ಕನಿಷ್ಠಪಕ್ಷ ಎಂಟು ಗಂಟೆಗೇ ಆಗಿರಬೇಕು. ಲಾಜಿಕಲಿ ಇದೇಸರಿ. ಹಾಗಾದರೆ, ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿ ಸಾವು ಒಂಬತ್ತರ ಆಸುಪಾಸಿನಲ್ಲಿ ನಡೆದಿದೆ ಅಂತ ಇದೆ. ಹೇಗೆ ಸಾಧ್ಯ? ಅದಲ್ಲದೆ... ಕೊಲೆ ಮಾಡಿ ಕೊಲೆಗಾರ ತಪ್ಪಿಸಿಕೊಂಡಿದ್ದಾದರೂ ಹೇಗೆ?'

ರುದ್ರೇಶ್ ತನ್ನ ಈ ಯೋಚನೆಗಳ ನಡುವೆಯೇ, "ಒಮ್ಮೆ ಆ ಜೀವನ್‌ನನ್ನು ಕರೆಯಿರಿ. ಇನ್ನೊಮ್ಮೆ ನನ್ನ ಮುಂದೆ ಅವನು ನೋಡಿದ್ದು, ಮಾಡಿದ್ದು ಎಲ್ಲಾ ವಿವರಿಸಲಿ." ಎಂದ.

ಅರ್ಧ ಗಂಟೆಯಲ್ಲಿ ಜೀವನ್ ಅಲ್ಲಿದ್ದ.

"ಬಿಜು ಆ ದಿನ ಗೋವಾಕ್ಕೆ ಹೊರಟಾಗ ನೀವು ಅವನನ್ನು ನೋಡಿದಿರಿ... ಸರಿ ತಾನೇ?''

"ಹೌದು ಸರ್, ದಿನಾ ನಾನು ಅದೇ ಸಮಯಕ್ಕೆ ವಾಕಿಂಗ್‌ಗೆ ಹೊರಡುತ್ತೇನೆ..."

"ಬಿಜು ತನ್ನ ಹೆಂಡತಿಗೆ ಬೈ ಹೇಳಿದ್ದು ನೀವು ನೋಡಿದಿರಾ?"

"ಹೌದು ಸರ್... ಎಲ್ಲಿಗೆ ಪ್ರಯಾಣ ಅಂತ ಕೇಳಿದೆ... ಗೋವಾ ಅಂತ ಹೇಳಿದ..."

ಸೀತಾರಾಮಯ್ಯನಿಗೆ ಏನೂ ಅರ್ಥ ಆಗಲಿಲ್ಲ. ಅವನು ಹೇಳುತ್ತಿದ್ದುದನ್ನು ಸರಸರನೆ ಬರೆದುಕೊಳ್ಳತೊಡಗಿದ.

"ಬೆಳಗ್ಗೆ ಏನೇನಾಯಿತು ಹೇಳಿ..."